ಪುತ್ತೂರು ತಾಲ್ಲೂಕಿನ ನೆಲ್ಯಾಡಿ ಗ್ರಾಮದಲ್ಲಿ ಹಿಂದುಗಳನ್ನು ಕ್ರಿಶ್ಚಿಯನ್ ಮತಕ್ಕೆ ಮತಾಂತರ ಮಾಡಿಸುತ್ತಿರುವುದು

2427 (2858) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪುತ್ತೂರು ತಾಲ್ಲೂಕಿನ ನೆಲ್ಯಾಡಿ ಗ್ರಾಮದಲ್ಲಿ ಹಿಂದುಗಳನ್ನು ಕ್ರಿಶ್ಚಿಯನ್ ಮತಕ್ಕೆ ಮತಾಂತರ ಮಾಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಮತಾಂತರವು ಹಣದ ಆಮಿಶವೊಡ್ಡಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಸದರಿಯಲ್ಲಿ ಬಲಾತ್ಕಾರದ ಮತಾಂತರವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ದರ ಏರಿಕೆ

2428(2859) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಈಗಾಗಲೇ ಕೆಪಿಸಿಟಿಎಲ್ ನಿಗದಿಪಡಿಸಿರುವ ಘೋಷಣಾ ಪತ್ರವನ್ನು ಎಲ್ಲಾ ಬಳಕೆದಾರರಿಗೆ ತಲುಪಿಸಲಾಗಿದೆಯೇ;

ಆ) ತಲುಪಿಸದಿದ್ದಲ್ಲಿ ಯಾವಾಗ ತಲುಪಿಸಲಾಗುವುದು;

ಇ) ಹೆಚ್ಚುವರಿ ದರವನ್ನು ಘೋಷಣಾ ಪತ್ರ ಬಳಕೆದಾರರಿಂದ ಸ್ವೀಕರಿಸಿದ ನಂತರವೇ ಜಾರಿಗೊಳಿಸುವ ತೀರ್ಮಾನ ಸರ್ಕಾರಕ್ಕೆ ಇದೆಯೆ;

ಈ) ಹಾಗಿಲ್ಲದಿದ್ದಲ್ಲಿ ಯಾವ ಆಧಾರದ ಮೇಲೆ ಹೊಸ ದರವನ್ನು ವಿಧಿಸಲಾಗುತ್ತಿದೆ?

ಶ್ರೀ ವೀರಕುಮಾರ ಆ. ಪಾಟೀಲ್ (ಇಂದನ ಸಚಿವರು) :—

ಅ) ರಾಜ್ಯಾದ್ದಂತ ನೀರಾವರಿ ಪಂಪುಸೆಟ್ಟುಗಳ ಬಹುತೇಕ ಬಳಕೆದಾರರಿಗೆ ಫೋಷಣಾ ಪತ್ರವನ್ನು ಕಳುಹಿಸಲಾಗಿದೆ.

ಆ) ಎಲ್ಲಾ ನೀರಾವರಿ ಬಳಕೆದಾರರಿಗೆ ಫೋಷಣಾ ಪತ್ರವನ್ನು ತಲುಪಿಸಲು ಎರ್ಪಾಡಿಸಲಾಗಿದೆ ಮತ್ತು ದಿನಪತ್ರಿಕೆಗಳಲ್ಲಿ ಸಹಾ ಈ ನಮೂನೆಯನ್ನು ಪ್ರಕಟಿಸಲಾಗಿತ್ತು. ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಸಹಾ ಜಾಹೀರಾತು ಮುಖೇನ ಗ್ರಾಹಕರ ಗಮನಕ್ಕೆ ತರಲಾಗಿತ್ತು. ನೀರಾವರಿ ಪಂಪುಸೆಟ್ಟು ಗ್ರಾಹಕರು "ಅಸಲು ಪಾವತಿ ಯೋಜನೆ-2000"ರ ಅಡಿಯಲ್ಲಿ ಹಣ ಪಾವತಿ ಮಾಡಲು ಬಂದಾಗ, ಫೋಷಣಾ ಪತ್ರವನ್ನು ಸ್ವೀಕರಿಸಲು ಆದೇಶ ನೀಡಲಾಗಿದೆ.

ಇ) ಇಲ್ಲ

ಈ) ಈ ಫೋಷಣಾ ಪತ್ರವನ್ನು ನೀಡಿದ ನೀರಾವರಿ ಪಂಪುಸೆಟ್ ಗ್ರಾಹಕರಿಗೆ ಹೊಸ ದರವನ್ನು ವಿಧಿಸಲಾಗುತ್ತದೆ ಮತ್ತು ಕ್ಷೇತ್ರಾಧಿಕಾರಿಗಳು, ಆದಾಯ ತೆರಿಗೆ ಇಲಾಖೆ, ಆರ್.ಟಿ.ಓ ಹಾಗೂ ಸಂಬಂಧಪಟ್ಟ ಇಲಾಖೆಯಿಂದ ವಿವರಗಳನ್ನು ಪಡೆದು ನೀರಾವರಿ ಪಂಪುಸೆಟ್ಟುಗಳ ವರ್ಗೀಕರಣವನ್ನು ಗುರುತಿಸಿ ಹೊಸ ದರವನ್ನು ವಿಧಿಸಲಾಗುತ್ತದೆ.

ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ

2429(2872) ಶ್ರೀ ಎಸ್. ಸಂಪಂಗಿ (ಬಾಗೇಪಲ್ಲಿ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ನೀರಿನ ಬಳಕೆಯಿಂದ ಅನೇಕ ಸಾರ್ವಜನಿಕರು ರೋಗಗ್ರಸ್ತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ ಇದನ್ನು ನಿರ್ಮೂಲನೆ ಮಾಡಲು ಯಾವ ಯಾವ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್.ಎ. ಕೃಷ್ಣ (ಮುಖ್ಯ ಮಂತ್ರಿಯವರು) :—

ಅ) ಹೌದು

ಆ) ಈ ತೊಂದರೆ ನಿವಾರಿಸಲು ಚಿತ್ರಾವತಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ ಪಂಗೋದು ಗ್ರಾಮದ ಬಳಿ ಹೊಸ ಕೆರೆ ನಿರ್ಮಿಸಿ ಅಲ್ಲಿ ನೀರನ್ನು ಶೇಕರಿಸಿ ಶುದ್ಧೀಕರಿಸಿ ಈ ಪಟ್ಟಣಗಳ ಜನತೆಗೆ ಸಮರ್ಪಕ ಹಾಗೂ ಶುದ್ಧ ನೀರು ಸರಬರಾಜುಮಾಡಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂದಿಸಿದಂತೆ ಅಂದಾಜುಗಳನ್ನು ತಯಾರಿಸಲಾಗುತ್ತಿದೆ.